ಅರ್ಥಮಾಡಿಕೊಳ್ಳದಿದ್ದರೆ ಬಹಳ ಕಷ್ಟ ಇದೆ. ಇದು ಒಂದು ಬಾಗ. ಎರಡನೆಯದು ನಮಗೆ ಕಳಕಳಿ ಇದೆ, ನಿಮಗಿಂತಲೂ ನಿಮ್ಮ ನಿರೀಕ್ಷೆಗಿಂತಲೂ ನಾವು ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಲ್ಲಾ, ನನ್ನದೊಂದು ಪ್ರಶ್ನೆ ಸ್ವಾಮಿ. ಈ ಒಂದು ಸದನದಲ್ಲಿ ತೀರ್ಮಾನವಾಯಿತು, ಮಾರನೆಯ ದಿವಸವೇ ಹೇಳಬೇಕು. ಸದನ ನಡೆಯುತ್ತಿರುವಾಗ ಇಲ್ಲಿ ಹೇಳುವುದಕ್ಕಿಂತ ಮುಂಚೆ ಆಚೆ ಹೇಳಬಾರದು ಎಂದು ಮಾನ್ಯ ಸಿಂಧ್ಯಾರವರು ಬಹಳ ಗಟ್ಟಿಯಾಗಿ ಸ್ಪಷ್ಟವಾಗಿ ಹೇಳಿದರು. ಒಂದು ಉಪಸಮಿತಿ ರಚನೆಯಾಗುತ್ತದೆ. ಯಾವುತ್ತು ಎಂದರೆ ಗುರುವಾರ. ನೀವು ಏನೇ ಹೇಳಬಹುದು? ರಜಾ ಇತ್ತು, ಚೀಫ್ ಜಸ್ಟೀಸ್‌ರವರ ಕಾರ್ಯಕ್ರಮ ಇತ್ತು, ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಕಾರ್ಯಕ್ರಮ ಇತ್ತು ಎಂದು. ಸದನದಲ್ಲಿ ಹೇಳಿದ್ದಕ್ಕಿಂತ ಲಕ್ಷಾಂತರ ಯುವಕ ಯುವತಿಯರ ಭವಿಷ್ಯಕ್ಕಿಂತ, ಈ ಕಾರ್ಯಕ್ರಮಗಳು ಮುಖ್ಯವಾಗುತ್ತವೆಯೇ? ನೀವು ಯಾವುದಕ್ಕೆ ಆದ್ಯತೆ ಕೊಡುತ್ತೀರಿ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ನೀವು ಒಂದು ಉಪಸಮಿತಿಯನ್ನು ಮಾಡಿದ ತಕ್ಷಣ ಗಟ್ಟಿಯಾಗಿ ಇಲ್ಲಿ ಕುಳಿತುಕೊಂಡು ಕೆಲಸ ಮಾಡಬೇಕು. You had a valid reason not to go to those functions. ಇದೊಂದು ಸಮಿತಿಯಾಗಿದೆ ನಾವು ಇಲ್ಲಿ ಕೆಲಸ ಮಾಡಬೇಕು ಎಂದು. You could have given a proper fitting answer in this House. ಇವತ್ತು ಇಡೀ ರಾಜ್ಯಕ್ಕೆ ಒಂದು ಮೆಸೇಜ್ ಹೋಗುತ್ತಿದೆ. ನಾನು ಆದಕ್ಕೋಸ್ಕರ ಹೇಳುತ್ತಿರುವುದು, ಕಳಕಳಿ ಬರೀ ಮಾತಿನಲ್ಲಿ ಇರಬಾರದು. ನಮ್ಮ ಬಾಯಿಯನ್ನು ಮುಚ್ಚಿಸುವುದಕ್ಕೋಸ್ಕರ ಇರಬಾರದು. To score a point ಇರಬಾರದು. ಇವತ್ತೇನೋ ನೀವು ಹೇಳುತ್ತಿದ್ದೀರಲ್ಲಾ, ಇವತ್ತಾದರೂ ದಯವಿಟ್ಟು ಕುಳಿತುಕೊಳ್ಳಿ. ಕುಳಿತುಕೊಂಡು ಇನ್ಯಾವುದೋ ಸುದ್ದಿ ಬಂತು ಎಂದು ಉಪಸಮಿತಿಯ ಸಭೆಯನ್ನು ವಿಸರ್ಜಿಸುವುದು, ಉಪಸಮಿತಿಯನ್ನೇ ವಿಸರ್ಜಿಸುವುದು ಆ ರೀತಿ ಕೆಲಸ ಮಾಡಬೇಡಿ. ದಯವಿಟ್ಟು ಈ ಸದನದಲ್ಲಿ ನಾಳೆ ನಮಗೆಲ್ಲಾ ವಿಶ್ವಾಸ ಕೊಡುವುದಕ್ಕಿಂತ ಜಾಸ್ತಿ ಆ ವಿದ್ಯಾರ್ಥಿಗಳಿಗೆ ವಿಶ್ವಾಸ ಕೊಡತಕ್ಕ ಒಂದು ನಿರ್ಣಯವನ್ನು ಇಲ್ಲಿ ನೀವು ಪ್ರಕಟಿಸಿ.

6. ಶಾಸನ ರಚನೆ:

ಅ. ವಿಧೇಯಕದ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

i) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ,2003 ಮಂಡನೆಗೆ ಅನುಮತಿ ಕೋರಿಕೆ

+ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಉಪಾಧ್ಯಕ್ಷರೇ, "2003 ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಸಬೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ:"2003 ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕಾಗೋಡು ತಿಮ್ಮಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೇ, "2003 ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಉಪಾಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-III

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಾಗೋಡು ತಿಮ್ಮಪ್ಪ- ಮಾನ್ಯ ಉಪಾಧ್ಯಕ್ಷರೆ, " 2003ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ- ಮಾನ್ಯ ಉಪಾಧ್ಯಕ್ಷರೇ, ಈ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ ಏನಿತ್ತು, ಇದನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಆ ಕಾನೂನು ಜಾರಿಗೆ ಬಂದ ಎರಡು ವರ್ಷಗಳ ಅವಧಿಯಲ್ಲಿ ಈ ಸಾರ್ವಜನಿಕ ಉದ್ಯಮಗಳಿಂದ ಖರೀದಿ ಮಾಡುವ ಸಂದರ್ಭದಲ್ಲಿ ನಮಗೆ ಸಾರ್ವಜನಿಕ ಉದ್ಯಮಗಳು, ಬೋರ್ಡುಗಳು ಮತ್ತು ಕಾರ್ಪೊರೇಷನ್‌ನಿಂದ ವಿನಾಯಿತಿಯ ಅವಕಾಶ ಇತ್ತು. ಅದನ್ನು ಎರಡು ವರ್ಷಗಳ ಬದಲಾಗಿ ಮೂರು ವರ್ಷ ಎನ್ನುವ ಒಂದು ತಿದ್ದುಪಡಿಯನ್ನು ತರಲಾಗಿದೆ. ಈಗಾಗಲೇ ಆರು ತಿಂಗಳಾಗಿ ಹೋಗಿದೆ. ಇನ್ನು ಉಳಿದಿರುವುದು ಆರು ತಿಂಗಳು. ಆದ್ದರಿಂದ ಎರಡು ವರ್ಷ ಎನ್ನುವ ಬದಲಾಗಿ ಮೂರು ವರ್ಷ ಎನ್ನುವ ಒಂದು ತಿದ್ದುಪಡಿಯನ್ನು ಇದರಲ್ಲಿ ಮಂಡಿಸಿದೆ. ದಯವಿಟ್ಟು ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ(ಕನಕಪುರ):- ಮಾನ್ಯ ಉಪಾಧ್ಯಕ್ಷರೇ, ನನ್ನ ಅಭಿಪ್ರಾಯದಲ್ಲಿ ಇದರ ಅವಶ್ಯಕತೆಯೇ ಇಲ್ಲ. ಏಕೆಂದರೆ ಮೊದಲನೆಯದಾಗಿ ಪಾರದರ್ಶಕತೆಯ ಕಾನೂನನ್ನು ಮಾಡಿ ವಿಧೇಯಕವನ್ನು ನಾವು ಕಳೆದ ಎರಡು ವರ್ಷಗಳ ಹಿಂದೆ ಪಾಸ್ ಮಾಡಿ ಭ್ರಷ್ಟಾಚಾರದ ಮೇಲೆ ನಿಯಂತ್ರಣವನ್ನು ಸಾಧನೆ ಮಾಡಿದ್ದೇವೆ ಎನ್ನತಕ್ಕದ್ದು ನನ್ನ ಅಭಿಪ್ರಾಯದಲ್ಲಿ ಒಂದು ಸುಳ್ಳು ಮಾತು. ಅದರಿಂದೇನೂ ಎಲ್ಲಿಯೂ ಸಹಿತ ಭ್ರಷ್ಟಾಚಾರ ಕಡಿಮೆಯಾಗಿಲ್ಲ. ಇನ್ನು ಇವರು ತಂದಿರುವ ತಿದ್ದುಪಡಿ ಏನು ಇದೆ ಎಂದರೆ ಸರ್ಕಾರಿ ವಲಯದಲ್ಲಿರುವ ಮಂಡಳಿಗಳು, ಕಾರ್ಪೊರೇಷನ್‌ಗಳು, ಬೋರ್ಡ್‌ಗಳು ಇವುಗಳಿಗೆಲ್ಲಾ ಎರಡು ವರ್ಷ ಎಕ್ಸ್‌ಂಪ್ಷನನ್ನು ಕೊಟ್ಟಿದ್ದೆವು ಈಗ ಮೂರು ವರ್ಷ ಕೊಡಿ ಎಂದು ಕೇಳುತ್ತಿದ್ದಾರೆ. ಈ ಸರ್ಕಾರಿ ವಲಯದಲ್ಲಿರುವ ಎಲ್ಲಾ ಉದ್ಯಮಗಳನ್ನು ಶಾಶ್ವತವಾಗಿ ಮುಚ್ಚುತ್ತಿರುವ ಸಂದರ್ಭದಲ್ಲಿ ಇದ್ಯಾಕೆ ಎಕ್ಸ್‌ಂಪನ್? ಈ ನಾಟಕಗಳೆಲ್ಲಾ ಏಕೆ? ಪರ್ಮನೆಂಟ್ ಆಗಿ ಒಂದು ಸಾರಿ ಎಕ್ಸ್‌ಂಪ್ಷನನ್ನು ತೆಗೆದುಕೊಂಡು ಬಿಟ್ಟರೆ ಒಳ್ಳೆಯದು. ಇದೊಂದು ಅನವಶ್ಯಕವಾಗಿರುವ ಕಸರತ್ತು ಸ್ವಾಮಿ ಗಾಳಿಯಲ್ಲಿ ಗುದ್ದಾಟ. ಆ ಲಾ ಸೆಕ್ರೆಟರಿಗೆ, ಲಾ ಮಿನಿಸ್ಟರ್‌ಗೆ, ಮತ್ತು ನಿಮಗೆ, ಅಸೆಂಬ್ಲಿಗೆ, ಟೈಮ್ ವೇಸ್ಟ್ ಮಾಡುವುದಕ್ಕೆ ಮಾಡಿರತಕ್ಕದ್ದು ಇದೊಂದು. ಇದಕ್ಕೆ ಹಲ್ಲೂ ಇಲ್ಲ. ಎಂಥದ್ದೂ ಇಲ್ಲ. ಅಲ್ಲಿ ಏನೂ ನಡೆಯುತ್ತಲೇ ಇಲ್ಲ. ಇಂಡಸ್ಟ್ರೀಯಲ್ ಅನ್‌ಎಂಪ್ಲಾಯ್‌ಮೆಂಟ್ ಕ್ರಿಯೇಟ್ ಮಾಡತಕ್ಕ ಇಂಡಸ್ಟ್ರೀಸ್ ಮಿನಿಸ್ಟರ್ ಮೈಸೂರು ಲ್ಯಾಂಪ್ಸ್ ಬಗ್ಗೆ ಭಾಷಣ ಮಾಡಿದರು. ಮೈಸೂರು ಲ್ಯಾಂಪ್ಸ್‌ನಲ್ಲಿ ಏನು ಪರ್ಚೇಸ್ ಮಾಡುತ್ತಿದ್ದಾರೆ? ಎಕ್ಸೆಫ್ಟ್ ಕೆಎಸ್‌ಆರ್‌ಟಿಸಿ ಇನ್ಯಾವುದಕ್ಕೂ ಸಹಿತ ಶಕ್ತಿ ಇಲ್ಲದೇ ಇರತಕ್ಕಂಥದ್ದೇ,